

# ವರ್ಚುವಲ್ ವಾರ್ಷಿಕೋತ್ಸವ

**ಶಾಲಾ ವಾರ್ಷಿಕೋತ್ಸವ ಹಾಗೂ ಕ್ರೀಡಾಕೂಟಗಳಿಗೆ ಶೈಕ್ಷಣಿಕ ವರ್ಷದಲ್ಲಿ ವಿಶೇಷ ಮಹತ್ವವಿದೆ. ಆದರೆ, ಈ ವರ್ಷ ಮಕ್ಕಳ 'ಡಿಸೆಂಬರ್ ಸಂಭ್ರಮ'ವನ್ನು ಕೊರೊನಾ ಕಸಿದುಕೊಂಡಿದೆ.**

■ ಸ್ವಯಂಪ್ರಭಾ

ಡಿಸೆಂಬರ್ ತಿಂಗಳು ಸೌಂದರ್ಯಕ್ಕೆ ಇನ್ನೊಂದು ಹೆಸರು. ಮುಂಜಾನೆ ಮಂಜುಬಿದ್ದು, ಪ್ರಕೃತಿಯು ಸಿಹಿಯಾಗಿ ಗುನುಗುತ್ತಿರುವಂತೆ ಗೋಚರಿಸುತ್ತದೆ. ಧನುರ್ಮಾಸದಲ್ಲಿ ಆಕಾಶವು ಬಹಳ ಹತ್ತಿರವಾಗಿದ್ದು, ಇನ್ನೇನು ನಕ್ಷತ್ರಗಳೆಲ್ಲಾ ನಮ್ಮ ಬೊಗಸೆಗೆ ಸಿಕ್ಕೇಬಿಟ್ಟವು ಎಂಬಂತೆ ಭಾಸವಾಗುತ್ತದೆ. ಪ್ರಕೃತಿಯ ಈ ವಿಲಾಸವನ್ನು ಹೀಗೆ ಎಷ್ಟು ಬೇಕಾದರೂ ವರ್ಣಿಸಬಹುದಾದರೂ, ಡಿಸೆಂಬರ್‌ಗೆ ಮತ್ತೊಂದು ಮಹತ್ವ ಇದೆ. ಅದು ಡಿಸೆಂಬರ್ ಜೊತೆಗೆ ಶಾಲೆಗಳಲ್ಲಿ ಕಾಣಿಸುವ ಸಂಭ್ರಮ.

ಶೈಕ್ಷಣಿಕ ವರ್ಷದಲ್ಲಿ ನವೆಂಬರ್–ಡಿಸೆಂಬರ್ ಬಂತೆಂದರೆ, ಶಾಲೆಗಳಲ್ಲಿ ಕ್ರೀಡಾ ದಿನಾಚರಣೆಗಳು, ವಾರ್ಷಿಕೋತ್ಸವಗಳ ಭರಾಟೆ. ಮಕ್ಕಳು ಒಂದಲ್ಲ ಒಂದು ಹಾಡನ್ನು ಗುನುಗುತ್ತ, ವೇಷಭೂಷಣಗಳಿಗಾಗಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತ, ವಿವಿಧ ಸ್ಪರ್ಧೆಗಳಲ್ಲಿ ತಾವೇ ಗೆಲ್ಲಬೇಕು ಎಂಬ ಹುಮ್ಮಸ್ಸಿನಲ್ಲಿ ಓಡಾಡುವ ಸಮಯ. ಅಂದರೆ, ಶಾಲೆಯಲ್ಲಿ ಮಕ್ಕಳು ಮನಸ್ಫೂರ್ತಿಯಾಗಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ತಿಂಗಳೆಂದರೆ ಅದು ಡಿಸೆಂಬರ್. ಫಿಲ್ಮ್ ಡಾನ್ಸ್, ಶಾಸ್ತ್ರೀಯ ನೃತ್ಯ, ನಾಟಕ, ಭಾಷಣ ಸ್ಪರ್ಧೆ, ಪೋಸ್ಟರ್ ಮಾಡುವುದು, ಮೆಹಂದಿ ಸ್ಪರ್ಧೆ, ಅಡುಗೆ ಸ್ಪರ್ಧೆ... ಹೀಗೆ ಮಕ್ಕಳು ಅನೇಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸಮಯ ಡಿಸೆಂಬರ್.

ವಾರ್ಷಿಕೋತ್ಸವದ ದಿನ ವೇದಿಕೆ ಮುಂದಿನ ತುಂಬಿದ ಸಭೆಯ ಮುಂದೆ ನಡುಗುವ ಕೈಕಾಲುಗಳನ್ನು ನಿಭಾಯಿಸುತ್ತ, ವೇದಿಕೆಯಲ್ಲಿ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮಕ್ಕಳ ಗಡಣ. ಡಾನ್ಸ್ ಮರೆತು ನಿಂತು ಬಿಡುವ ಪುಟ್ಟ ಕಂದ. ಮತ್ತೆ ವೇದಿಕೆಯ ಅಂಚಿನಲ್ಲಿ ನೃತ್ಯ ಮಾಡುವ ಟೀಚರ್‌ನತ್ತ ಕಣ್ಣು ಹಾಯಿಸುತ್ತ, ಡಾನ್ಸ್ ನೆನಪು ಮಾಡಿಕೊಳ್ಳುವ ಪುಟಾಣಿ. ಭಾಷಣ ತಪ್ಪಿ ಹೋಗಿ, ಕಂಗಾಲಾಗುವ ಹುಡುಗ. ಮತ್ತೆ ಶುರುವಿನಿಂದ ಭಾಷಣ ಆರಂಭಿಸಿ ಚಪ್ಪಾಳೆ ಗಿಟ್ಟಿಸಿಕೊಳ್ಳುವ ಪೋರ. ಅಹಾ... ಮಕ್ಕಳ ತಪ್ಪುಗಳೂ ಚಂದ!

ಬಹುಮಾನ ಸಿಗದ ಕಂದನ ಉದ್ದ ತುಟಿಗಳು. ಬಹುಮಾನ ಪಡೆದ ಕಂದನ ಅಮ್ಮನ ಮುಖ ಮೊರದಗಲ. ಕೆಂಪು ಕದಪುಗಳ ಪುಟ್ಟಿಯ ಅಭಿನಯಕ್ಕೆ ಚಪ್ಪಾಳೆ. ಸಂಭ್ರಮ ಮತ್ತು ಸಂತೃಪ್ತಿಯ ಭಾವಗಳು ಪ್ರಕಾಶಮಾನವಾಗಿ ಗೋಚರಿಸುವ ಸಮಾರಂಭ ಶಾಲಾ ವಾರ್ಷಿಕೋತ್ಸವ.

ಆದರೆ ಈ 2020ರ ಡಿಸೆಂಬರ್ ಒಂದು ಅಭಾಸದ ತಿಂಗಳಾಗಿಬಿಟ್ಟಿಎ3. ಮಕ್ಕಳೋ ತಮ್ಮ ಮೊಬೈಲ್ ಎಂಬ ಗೆಳೆಯನನ್ನೇ ಪ್ರೇಕ್ಷಕರನ್ನಾಗಿಸಿಕೊಳ್ಳಬೇಕಾಗಿದೆ. ಅದರ ಎದುರೇ ನೃತ್ಯ ಮಾಡಿ, ಅದನ್ನು ಎಡಿಟ್ ಮಾಡಿ ಅಪ್‌ಲೋಡ್ ಮಾಡುವುದರಲ್ಲೇ ಅವರೀಗ ತೃಪ್ತಿ ಪಟ್ಟುಕೊಳ್ಳಬೇಕು. ತಮ್ಮ ನೃತ್ಯ–ನಾಟಕ, ಭಾಷಣ ನೋಡಲು ಅಪ್ಪ, ಅಮ್ಮ, ಅಣ್ಣ ತಂಗಿ ಬರುತ್ತಾರೆ ಎಂಬ ಸಂಭ್ರಮವಿಲ್ಲ. ಮನಸ್ಸಿನೊಳಗೆ ಸಣ್ಣದೊಂದು ಜಂಬವನ್ನು ತುಂಬಿಸಿಕೊಂಡು ಓಡಾಡುವ ಅವಕಾಶ ಅವರಿಗಿಲ್ಲ. ಸಿದ್ಧತೆಯಲ್ಲಿ ಮುಳುಗಿಹೋಗುವ, ತನಗೇ ಪ್ರೈಸ್ ಬೇಕು ಎಂದು ಜಗಳವಾಡುವ ಯಾವ ಅವಕಾಶಗಳನ್ನೂ ಈ ಡಿಸೆಂಬರ್ ಅವರಿಗೆ ಕಲ್ಪಿಸಿಲ್ಲ!

ಪ್ರಕೃತಿಯೋ ತನ್ನ ಪಾಡಿಗೆ ತಾನು ಅರಳುತ್ತಿದೆ. ಗಾಳಿಯೋ... ಶಿವ ಶಿವಾ ಅಂತ ಶಿವರಾತ್ರಿಯನ್ನು ಕಾಯುತ್ತಿದೆ. ಮುಂಜಾನೆಯ ಮಂಜು ಮಕ್ಕಳನ್ನು ಮತ್ತಷ್ಟು ತಡವಾಗಿ ಏಳಿ ಎಂದು ಮುಚ್ಚಟೆ ಮಾಡುತ್ತಿದೆ. ಮಕ್ಕಳು ಹೇಗೋ ಎದ್ದವರೇ, ತಾವೇ ಮಾಡಿದ ನೃತ್ಯದ ವಿಡಿಯೊವನ್ನು ಎಡಿಟ್ ಮಾಡುತ್ತಾ ಕುಳಿತಿದ್ದಾರೆ. ಭಾಷಣದಲ್ಲಿ ನಾನು ಇನ್ನಷ್ಟು ಬೆಳ್ಳಗೆ ಕಾಣಬೇಕು ಎಂಬ ಟೆನ್ಶನ್ ಒಬ್ಬ ಹುಡುಗನದ್ದಾದರೆ, ಪೇಂಟಿಂಗ್‌ಗೆ ಟಚ್‌ಅಪ್ ಮಾಡುವ ಆ್ಯಪ್ ಯಾವುದಿದೆ ಎಂದು ಹುಡುಕುವ ಒತ್ತಡ ಮತ್ತೊಬ್ಬಳು ಪುಟ್ಟಿಗೆ. ವರ್ಚುವಲ್ ವಾರ್ಷಿಕೋತ್ಸವದ ಈ ಗುಂಗಿಗೆ ಹೇಗೆ ನೆರವಾಗುವುದು ಎಂಬುದು ಅಪ್ಪಂಗೂ ಗೊತ್ತಾಗುತ್ತಿಲ್ಲ. ಅಮ್ಮನಿಗೂ ಸ್ಪಷ್ಟತೆಯಿಲ್ಲ. ಆದರೂ, ಮಕ್ಕಳು ಹೇಳಿದ ಕೆಲಸವನ್ನು ಮಾಡುವುದು ಅವರಿಗೆ ಅನಿವಾರ್ಯವಾಗಿದೆ.

ಸ್ಪರ್ಧೆಗಳಿಗಾಗಿ ಚೆನ್ನಾಗಿ ಅಭ್ಯಾಸ ಮಾಡಿ, ಭಾಗವಹಿಸಿ, ಯಶಸ್ಸನ್ನು ಸಂಪಾದಿಸುವುದು ಕಳೆದ ವರ್ಷದ ಮಾತಾಗಿತ್ತು. ತಮ್ಮ ಪ್ರೆಸೆಂಟೇಷನ್ ಶೂಟಿಂಗ್ ಮಾಡಿಕೊಂಡು, ಆ ಕ್ಲಿಪ್ಪಿಂಗ್ ಅನ್ನು ಚಂದಗಾಣಿಸುವುದು ಹೇಗೆ ಎಂಬ ಹುಡುಕಾಟ ಈ ವರ್ಷದ ಮಾತು.

ಈ ಬದಲಾವಣೆ ಅಷ್ಟೇನೂ ಚಂದವಿಲ್ಲ.

ಇತ್ತೀಚೆಗೆ, ಆನ್‌ಲೈನ್‌ನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮುಖ್ಯೋಪಾಧ್ಯಾಯಿನಿಯೊಬ್ಬರು ಮಾತನಾಡುತ್ತಿರಬೇಕಾದರೆ, ವಿದ್ಯಾರ್ಥಿಯೊಬ್ಬ ಪ್ರಶ್ನೆಯೊಂದನ್ನು ಟೈಪಿಸಿದ್ದ. 'ವರ್ಚುವಲ್ ವಾರ್ಷಿಕೋತ್ಸವ ತೊಂದರೆಯಿಲ್ಲ ಟೀಚರ್. ಆದರೆ, ವರ್ಚುವಲ್ ಕ್ರೀಡಾಕೂಟ ದಯವಿಟ್ಟು ಆಯೋಜಿಸಬೇಡಿ. ದಯವಿಟ್ಟು ಶಾಲೆಯ ಮೈದಾನಗಳಿಗೆ ಬರಲು ಅವಕಾಶ ಕೊಡಿ'.

ಓ ಕಾಲವೇ, ಮಕ್ಕಳ ನಿಜವಾದ ಖುಷಿಯನ್ನು ಕಸಿದುಕೊಂಡು, ಅವರ ಕೈಗೆ ಕೃತಕ ಖುಷಿಯ ಹೂಗಳನ್ನು ಕೊಡದಿರು...

ಪ್ರತಿಕ್ರಿಯಿಸಿ: feedback@sudha.co.in